ದಿನಾಂಕಃ 23.02.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಆರ್.ಆರ್ 3 ರಿಂದ 5 ನೇ ಪ್ರತಿವಾದಿಗಳ ಪರ ವಕೀಲರಿಂದಃ ನಾನು ಡಿಪ್ಲೊಮೋ ವಿಧ್ಯಾಭ್ಯಾಸ ಮಾಡಿದ್ದೇನೆ. ನಮ್ಮ ಕುಟುಂಬದ ವಂಶವೃಕ್ಷ ಮತ್ತು ಆಸ್ತಿಗಳ ಬಗ್ಗೆ ಮಾಹಿತಿ ಇದೆ. ನಮ್ಮ ಕುಟುಂದದಲ್ಲಿ ನಮ್ಮ ತಂದೆಯವರೇ ಹಿರಿಯರು ಅಂದರೆ ಸರಿ. ಆದ್ದರಿಂದ ನನ್ನ ತಂದೆಯೇ ಎಲ್ಲಾ ವ್ಯವಹಾರಗಳನ್ನು ನಿರ್ವಹಿಸುತಿತದ್ದರು ಅಂದರೆ ಸರಿ, ನನ್ನ ಚಿಕ್ಕಪ್ಪದಿಂದರೂ ಸಹ ನನ್ನ ತಂದೆಯೊಂದಿಗೆ ನಿರ್ವಹಿಸುತ್ತಿದ್ದರು. ನನ್ನ ತಂದೆ ಮತ್ತು ಚಿಕ್ಕಪ್ಪಂದಿರೂ ಒಂದೇ ಮನೆಯಲ್ಲಿ ಇದ್ದರು. ಸದರಿ ಮನೆಯ ಸಂಖ್ಯೆ ಹೇಳಲು ಆಗುವುದಿಲ್ಲ. ಚೆಕ್ಕುಬಂದಿ ದಕ್ಷಿಣಕ್ಕೆ ದಾರಿ, ಪೂರ್ವಕ್ಕೆ ನಮ್ಮದೇ ಓಡಾಡುವ ಜಾಗ, ಪಶ್ವಿಮಕ್ಕೆ ಸಿದ್ದಮಲ್ಲಪ್ಪನ ಮನೆ ಮತ್ತು ಉತ್ತರಕೆ ನಮ್ಮದೆ ಮನೆಗಳು. ಈ ಮೇಲೆ ಹೇಳಿದ ಮನೆಯಲ್ಲಿ ಈ ದಾವೆ ದಾಖಲಿಸುವವರೆಗು ಎಲ್ಲರೂ ಒಟ್ಟಾಗಿ ಇದ್ದೆವು. ಸದರಿ ಮನೆಯ ಅಗಲ 30 ಅಡಿಗಳು ಮತ್ತು ಉದ್ದ ಸುಮಾರು 60 ರಿಂದ 70 ಅಡಿಗಳು ಇರುತ್ತದೆ. ನಮ್ಮ ಕುಟುಂಬದ ಒಟ್ಟು ಸದಸ್ಯರ ಸಂಖ್ಯೆ ಸುಮಾರು 35 ರಿಂದ 40 ಇರಬಹುದು. ಈ ದಾವೆ ದಾಖಲಿಸುವವರೆಗು ಕುಟುಂಬದ ಎಲ್ಲಾ ಸದಸ್ಯರು ಈ ಮನೆಯಲ್ಲಿ ವಾಸಿಸುತ್ತಿದ್ದೆವು ಎಂದು ಪ್ರತಿವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರಬಹುದು .

2. ಈ ದಾವೆಯನ್ನು ದಾಖಲಿಸಿದ ನಂತರ ಎಲ್ಲರೂ ಬೇರೆ ಬೇರೆ ಮನೆಗಳಲ್ಲಿ ಇದ್ದೇವೆ. ಈಗ ವಾಸಿಸುತ್ತಿರುವ ಮನೆಗಳು ನಮ್ಮ ಒಟ್ಟು ಕುಟುಂಬಕ್ಕೆ ಸೇರಿದ ಮನೆಗಳಾಗಿರುತ್ತವೆ. ದಾವಾ ಆಸ್ತಿಗಳಲ್ಲಿ ಕೆಲವು ನನ್ನ ತಂದೆ ಮತ್ತು ಕೆಲವು ನನ್ನ ಚಿಕ್ಕಪ್ಪಂದಿರ ಹೆಸರಿನಲ್ಲಿರುತ್ತವೆ, ನೊಂದಣಿ ಕಾಲಕ್ಕೆ ಯಾರು ಹಾಜರಿರುತ್ತಾರೋ ಅವರ ಹೆಸರಿನಲ್ಲಿ ಕ್ರಯಪತ್ರಗಳು ಇರುತ್ತವೆ . ಈ ರೀತಿ ಪ್ರತಿವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿಲ್ಲ ಅಂದರೆ ಬರೆಸಿರಬಹುದು.

ಡಿಡಬ್ಲ್ಯೂ-3
ಓ ಎಸ್ 47/2015

3. ತಿಪ್ಪೇಸ್ವಾಮಿ ತಂದೆ ಭೀಮಪ್ಪ ಅಂದರೆ ನನ್ನ ತಂದೆ. ಸರ್ವೆ ನಂಬರ 24-ಸಿ ವಿಸ್ತೀರ್ಣ 2.39 ಎಕರೆ, ಸರ್ವೆ ನಂಬರ 998/3 ವಿಸ್ತೀರ್ಣ 10 ಸೆಂಟ್ಸ ಮತ್ತು ಸರ್ವೆ ನಂಬರ 25/ಬಿ ವಿಸ್ತೀರ್ಣ 1.96 ಎಕರೆ ಈ ಆಸ್ತಿಗಳ ಕ್ರಯಪತ್ರ ನನ್ನ ತಂದೆಯ ಹೆಸರಿನಲ್ಲಿವೆ ಅಂದರೆ ಸರಿ, ಅವುಗಳನ್ನು ನನ್ನ ತಂದೆ ಸ್ವಂತ ಖರೀದಿಸಿರುತ್ತಾರೆ. ಈ ದಾವಾ ಆಸ್ತಿಗಳನ್ನು ದಾವೆ ದಾಖಲಿಸಿದ ನಂತರ ಖರೀದಿಸಿರುತ್ತಾರೆಯೇ ಅಂದರೆ ಇಲ್ಲ, ಅವುಗಳನ್ನು 1988 ಮತ್ತು 1996 ರಲ್ಲಿ ಖರೀದಿಸಿರುತ್ತಾರೆ. ಈ ಆಸ್ತಿಗಳನ್ನು ಖರೀದಿಸುವ ಸಮಯಕ್ಕೆ ನನ್ನ ತಂದೆ ಭಾಗ ಪಡೆದಿದ್ದರೇ ಅಂದರೆ ಇಲ್ಲಿಯವರೆಗೂ ವಿಭಾಗವಾಗಿಲ್ಲ. ಈ ಮೇಲೆ ಹೇಳಿದ ಮೂರೂ ಆಸ್ತಿಗಳ ಪಹಣಿ ಪತ್ರಿಕೆಗಳನ್ನು ನೋಡಿದ್ದೇನೆ. ಈ ಪಹಣಿ ಪತ್ರಿಕೆಗಳ ಪ್ರಕಾರ ಆಸ್ತಿಗಳ ಹಕ್ಕು ಬದಲಾವಣೆ ಯಾವ ರೀತಿ ಆಗಿದೆ ಅನ್ನುವುದನ್ನು ನೋಡಿದ್ದೇನೆ. ನನ್ನ ತಂದೆ ಅರ್ಜಿ ನೀಡಿದ ಪ್ರಕಾರ ಆಸ್ತಿಗಳ ಹಕ್ಕು ಬದಲಾವಣೆಯಾಗಿದೆ ಅಂದರೆ ಸರಿ. ಈ ಅಸ್ತಿಗಳ ಮೇಲೆ ಸಾಲ ಪಡೆದಿರುವವರು ನನ್ನ ತಂದೆ ಅಂದರೆ ಸರಿ. ಈ ರೀತಿ ಸಾಲ ಪಡೆಯಲು ನನ್ನ ತಂದೆ ನನ್ನ ಚಿಕ್ಕಪ್ಪಂದಿರ ಒಪ್ಪಿಗೆ ಮತ್ತು ಸಹಿ ಪಡೆದಿರುತ್ತಾರೆ. ಈ ಅಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಮತ್ತು ಈ ಆಸ್ತಿಗಳ ಮೇಲೆ ಸಾಲ ಪಡೆಯಲಾಗಿದೆ ಅನ್ನುವುದನ್ನು ಪ್ರತಿವಾದ ಪತ್ರದಲ್ಲಿ ಬರೆಯಲಾಗಿರಬಹುದು . ಈ ಆಸ್ತಿಗಳಲ್ಲಿ ನನ್ನ ಚಿಕ್ಕಪ್ಪಂದಿರಿಗೆ ಯಾವುದೇ ಭಾಗ ಇರುವುದಿಲ್ಲ.

4. ವಾದಿಯು ಕೆಲವು ಅಸ್ತಿಗಳನ್ನು ತನ್ನಹೆಸರಿನಲ್ಲಿ ಖರೀದಿ ಮಾಡಿದ್ದಾರೆ ಅಂದರೆ ಸರಿ, ಒಟ್ಟು ಕುಟುಂಬದಲ್ಲಿದ್ದಾಗ ಖರೀದಿ ಮಾಡಿದ್ದು, ಅವರ ಹೆಸರಿಗೆ ಕ್ರಯಪತ್ರಗಳಾಗಿವೆ. ವಾದಿಯ ಹೆಸರಿನಲ್ಲಿ ಕ್ರಯಪತ್ರ ಯಾವಾಗ ಆಗಿವೆ ಅನ್ನುವುದು ಗೊತ್ತಿಲ್ಲ. ನನ್ನ ತಂದೆಯು ಪ್ರತ್ಯೇಕವಾಗಿ ಆಸ್ತಿಗಳನ್ನು ಖರೀದಿ ಮಾಡಿದಂತೆ ವಾದಿಯು ಸಹ ಈ ಆಸ್ತಿಗಳನ್ನು ಸ್ವಯಾರ್ಜಿತವಾಗಿ ಖರೀದಿ ಮಾಡಿದ್ದರೆ ಅಂದರೆ ಅವರು ಒಟ್ಟು ಕುಟುಂಬದಲ್ಲಿರುವಾಗ ಖರೀದಿ ಮಾಡಿದ್ದಾರೆ. ನನ್ನ ತಂದೆ ಖರೀದಿಸಿದ ಆಸ್ತಿಗಳು ಅವರ ಸ್ವಂತ ಆಸ್ತಿಗಳು ಅದೇ ರೀತಿ ವಾದಿ ಖರೀದಿಸಿದ ಅಸ್ತಿಗಳು ವಾದಿಯ ಸ್ವಂತ ಆಸ್ತಿಗಳು ಅಂದರೆ ನನ್ನ ತಂದೆಯವರು ಉಳಿತಾಯ ಮಾಡಿದ್ದ ಹಣದಲ್ಲಿ ಆಸ್ತಿಗಳನ್ನು

ಖರೀದಿಸಿರುತ್ತಾರೆ. ವಾದಿ ಮತ್ತು ನನ್ನ ಉಳಿದ ಚಿಕ್ಕಪ್ಪಂದಿರೂ ಸಹ ತಾವು ಉಳಿತಾಯ ಮಾಡಿದ್ದ ಹಣದಲ್ಲಿ ತಮ್ಮ ಆಸ್ತಿಗಳನ್ನು ಖರೀದಿಸಿರುತ್ತಾರೆ ಅಂದರೆ ಸರಿಯಲ್ಲ, ಒಟ್ಟು ಕುಟುಂಬದಲ್ಲಿದ್ದಾಗ ಖರೀದಿಸಿರುತ್ತಾರೆ.

5. ಕೋಡಿಹಳ್ಳಿ ಭೀಮಪ್ಪ ಅಂದರೆ ನನ್ನ ತಂದೆಯ ತಂದೆ. ಅವರು 1995 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಾತನಿಗೆ ಎಷ್ಟು ಅಸ್ತಿಗಳು ಇದ್ದವು ಅಂದರೆ ಆಸ್ತಿಗಳು ಇವೆ ಆದರೆ ಎಷ್ಟು ಆಸ್ತಿಗಳು ಇವೆ ಎಂದು ಈಗ ನಿಖರವಾಗಿ ಹೇಳಲು ಆಗುವುದಿಲ್ಲ. ವಾದಿಗೆ ಎಷ್ಟು ಆಸ್ತಿಗಳು ಇವೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಸದರಿ ಆಸ್ತಿಗಳ ಕ್ರಯಪತ್ರಗಳನ್ನು ನೋಡಿದ್ದೇನೆ ಅಂದರೆ ಈಗ ಅವುಗಳ ಬಗ್ಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಪ್ರತಿವಾದಿ 3 ರವರು ಸುಮಾರು 40 ವರ್ಷಗಳಿಂದ ಪಾನ್ ಬ್ರೋಕರ್ , ಎಲ್.ಐ.ಸಿ ಏಜೆಂಟ್ ಮತ್ತು ವೈದ್ಯರಾಗಿ ವೃತ್ತಿ ಮಾಡುತ್ತಿದ್ದಾರೆ ಅಂದರೆ ಅವರು ವೈದ್ಯರು ಅನ್ನುವುದು ಗೊತ್ತು ಉಳಿದ ವೃತ್ತಿಗಳ ಬಗ್ಗೆ ಗೊತ್ತಿಲ್ಲ. ನಾವು ಒಟ್ಟು ಕುಟುಂಬದಲ್ಲಿರುವಾಗಲೇ 3 ನೇ ಪ್ರತಿವಾದಿಗೆ ಎಲ್ ಐ ಸಿ ಅವರು ಶತಕ ವೀರ ಎಂದು ಬಿರುದು ನೀಡಿ ನಮ್ಮ ಮನೆಯಲ್ಲಿಯೇ ಸನ್ಮಾನಿಸಿದ್ದರು, ಅದು ಪತ್ರಿಕೆಯಲ್ಲಿ ಪ್ರಕಟಣೆಗೊಂಡಿತ್ತು ಮತ್ತು ಅ ವಿಚಾರ ನನಗೆ ಗೊತ್ತಿದೆ ಅಂದರೆ ಸರಿಯಲ್ಲ. ಸದರಿ ಪ್ರಮಾಣ ಪತ್ರವನ್ನು 3 ನೇ ಪ್ರತಿವಾದಿಯು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯು ನ್ಯಾಯಾಲಯಕ್ಕೆ ಏನೇನೂ ದಾಖಲೆಗಳನ್ನು ಹಾಜರು ಪಡಿಸಿದ್ದಾರೆ ಅನ್ನುವುದನ್ನು ತಿಳಿದುಕೊಂಡಿಲ್ಲ. ನನ್ನ ತಂದೆ ಪ್ರತಿವಾದಿ ಪತ್ರದಲ್ಲಿ 3 ನೆ ಪ್ರತಿವಾದಿಗೆ ಏನೇನೂ ಆಸ್ತಿಗಳು ಇವೆ ಅನ್ನುವುದನ್ನು ಬರೆಸಿರಬಹುದು.

6. 3 ನೇ ಪ್ರತಿವಾದಿ ಖರೀದಿಸಿರುವ ಆಸ್ತಿಗಳ ಕೆಲವು ಕ್ರಯಪತ್ರಗಳನ್ನು ನೋಡಿದ್ದೇನೆ ಕೆಲವನ್ನು ನೋಡಿಲ್ಲ. 3 ನೇ ಪ್ರತಿವಾದಿಯು ಪಾನ್ ಬ್ರೋಕರ್, ಎಲ್.ಐ.ಸಿ ಏಜೆಂಟ್ ಮತ್ತು ವೈದ್ಯ ವೃತ್ತಿಯಿಂದ ಬಂದ ಆದಾಯದಿಂದ ಸ್ವಯಾರ್ಜಿತವಾಗಿ ಆಸ್ತಿಗಳನ್ನು

ಖರೀದಿ ಮಾಡಿದ್ದಾರೆ ಅಂದರೆ ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿದ್ದಾರೆ. ನನ್ನ ತಂದೆ, ವಾದಿ , 3 ನೇ ಪ್ರತಿವಾದಿ ಮತ್ತು ನನ್ನ ಉಳಿದ ಚಿಕ್ಕಪ್ಪಂದಿರ ಹೆಸರಿನಲ್ಲಿರುವ ಕ್ರಯಪತ್ರಗಳ ಆಧಾರದ ಮೇಲೆ ಅವರವರ ಹೆಸರಿಗೆ ಹಕ್ಕು ಬದಲಾವಣೆಯಾಗಿದೆ ಅಂದರೆ ಸರಿ. ಈ ರೀತಿ ಹಕ್ಕು ಬದಲಾವಣೆಯಾಗುವಾಗ ನನ್ನ ತಂದೆ ಮತ್ತು ಅವರ ಸಹೋದರರು ಸದರಿ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಆದ್ದರಿಂದ ಅವುಗಳಿಗೆ ಪ್ರತ್ಯೇಕವಾಗಿ ಹಕ್ಕು ಬದಲಾವಣೆ ಮಾಡಬೇಡಿ ಎಂದು ತಕರಾರು ಸಲ್ಲಿಸಿರುವುದಿಲ್ಲ ಅಂದರೆ ಸರಿ, ದಾವೆ ದಾಖಲಸಿದ ನಂತರ ತಕರಾರು ಸಲ್ಲಿಸಲಾಗಿದೆ. ಸದರಿ ತಕರಾರಿನ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ.

7. ನನ್ನ ತಂದೆ ತನ್ನ ಅಸ್ತಿಗಳ ಮೇಲೆ ಸಾಲ ಪಡೆದಂತೆ ನನ್ನ ಚಿಕ್ಕಪ್ಪಂದಿರೂ ಸಹ ತಮ್ಮ ತಮ್ಮ ಆಸ್ತಿಗಳ ಮೇಲೆ ಸಾಲ ಪಡೆದಿದ್ದು, ಯಾರೊಬ್ಬರೂ ತಕರಾರು ಮಾಡಿಲ್ಲ ಅಂದರೆ ಸರಿ, ಎಲ್ಲರೂ ಅನ್ಯೂನ್ಯವಾಗಿದ್ದರಿಂದ ತಕರಾರು ಮಾಡಿಲ್ಲ. ನಮಗೂ ಮತ್ತು ನಮ್ಮ ಚಿಕ್ಕಪ್ಪಂದಿರಿಗೂ ಪ್ರತ್ಯೇಕ ಮನೆಗಳು ಇವೆ ಅಂದರೆ ಸರಿ. ಅವು ಅವರವರ ಸ್ವಯಾರ್ಜಿತ ಅಸ್ತಿಗಳು ಅಂದರೆ 2 ಮನೆಗಳು ನನ್ನ ತಂದೆಯ ಹೆಸರಿನಲ್ಲಿವೆ ಉಳಿದ ಮನೆಗಳು ಒಟ್ಟು ಕುಟುಂಬದ ಅಸ್ತಿಗಳು. ನನ್ನ ಚಿಕ್ಕಪ್ಪಂದಿರ ಹೆಸರಿನಲ್ಲಿರುವ ಮನೆಗಳ ದಾಖಲೆಗಳನ್ನು ನೋಡಿದ್ದೇನೆ. ಸದರಿ ಆಸ್ತಿಗಳು ನನ್ನ ಚಿಕ್ಕಪ್ಪಂದಿರು ಖರೀದಿಸಿದ ಖರೀದಿ ಪತ್ರಗಳ ಆಧಾರದ ಮೇಲೆ ಹಕ್ಕು ಬದಲಾವಣೆಯಾಗಿವೆ ಅಂದರೆ ಸರಿಯಲ್ಲ, ಅವುಗಳಲ್ಲಿ ಕೆಲವು ಆಸ್ತಿಗಳು ನಮ್ಮ ತಾತನಿಂದ ಬಂದಿರುತ್ತವೆ.

8. ನಾವೆಲ್ಲರು ಒಟ್ಟು ಕುಟುಂಬದಲ್ಲಿ ವಾಸಿಸುತಿತದ್ದೇವೆ ಎಂದು ತೋರಿಸಲು ಪಡಿತರ ಚೀಟಿಯನ್ನು ಹಾಜರು ಪಡಿಸಿರಬಹುದು. ನನಗೆ ಈ ದಾವೆಯ ಬಗ್ಗೆ ಮತ್ತು ದಾವೆಯಲ್ಲಿ ಹಾಜರು ಪಡಿಸಿರುವ ದಾಖಲೆಗಳ ಬಗ್ಗೆ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ಪಡಿತರ ಚೀಟಿಯಲ್ಲಿ ಕುಟುಂಬದ ಸದಸ್ಯರ ಹೆಸರು ಮತ್ತು ಛಾಯಾಚಿತ್ರ ಇರುತ್ತದೆ ಅಂದರೆ ಸರಿ. ನಮ್ಮ ಕುಟಂಬಕ್ಕೆ ಒಂದೇ ಪಡಿತರ ಚೀಟಿ ಇರುವುದಿಲ್ಲ. ಎಲ್ಲರೂ ಬೇರೆ

ಬೇರೆಯಾಗಿರುವುದರಿಂದ ನಮ್ಮ ಕುಟುಂಬಕ್ಕೆ ಒಂದೇ ಪಡಿತರ ಚೀಟಿ ಇರುವುದಿಲ್ಲ ಅಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**ಹಿ.ಸಿ.ಜೆ. ಮತ್ತು ಜೆಎಂಎಫ್‌ಸಿ.,**
**ಕೂಡ್ಲಿಗಿ.**